OS 20/2022

PW-3

ದಿನಾಂಕಃ **29.01.2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಮುಖ್ಯ ವಿಚಾರಣೆಃ ವಾದಿಗಳ ಪರ ಶ್ರೀ. ಎ ಎನ್ ಆರ್ ವಕೀಲರಿಂದಃ**

ನಾನು ಮುಖ್ಯ ವಿಚಾರಣೆ ಪ್ರಮಾಣಪತ್ರವನ್ನು ಸಲ್ಲಿಸಿದ್ದು ಅದರಲ್ಲಿರುವ ಎಲ್ಲಾ ಅಂಶಗಳು ಸತ್ಯವಾಗಿದ್ದು ಅವುಗಳನ್ನು ನಾನೇ ಹೇಳಿ ಬರೆಯಿಸಿರುತ್ತೇನೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ.

ಸಾಕ್ಷಿ ನಿಪಿ.1 ರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಸಹಿಯನ್ನು ಈಗಾಗಲೇ ನಿಪಿ.1(ಸಿ) ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿ ನಿಪಿ.1 ರಲ್ಲಿರುವ ಮತ್ತೊಂದು ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಸಹಿಯು ತಮ್ಮದೆಂದು ಗುರುತಿಸಿರುತ್ತಾರೆ, ಸದರಿ ಸಹಿಯನ್ನು ನಿಪಿ.1(ಎಫ್) ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ.1 ರಲ್ಲಿ ಪ್ರತಿವಾದಿ ಮಂಜುನಾಥರವರ 7 ಸಹಿಗಳನ್ನು ಮಾಡಿರುತ್ತಾರೆಂದು ಹೇಳಿ ನಿಪಿ.1 ರ ಪ್ರತಿ ಪುಟದಲ್ಲಿರುವ ಸಹಿಗಳನ್ನು ನೋಡಿ ಗುರುತಿಸಲಾಗಿರುತ್ತಾರೆ. ಕೊನೆಯ ಪುಟದಲ್ಲಿರುವ ಮಂಜುನಾಥರವರ ಸಹಿಯನ್ನು ಈಗಾಗಲೇ ನಿಪಿ.1(ಎ) ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿ ಮತ್ತೋರ್ವ ಸಾಕ್ಷಿದಾರರಾದ ಆರ್ ಸೂರ್ಯನಾರಾಯಣ ರವರ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಸಹಿಯನ್ನು ಈಗಾಗಲೇ ನಿಪಿ.1(ಬಿ) ಮತ್ತು ನಿಪಿ.1(ಇ) ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿ ಪತ್ರ ಬರಹಗಾರರಾದ ರಾಮಚಂದ್ರಪ್ಪ ನವರ ರವರ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಸಹಿಯನ್ನು ಈಗಾಗಲೇ ನಿಪಿ.1(ಡಿ) ಎಂದು ಗುರುತಿಸಲಾಗಿರುತ್ತದೆ.

OS 20/2022

PW-3

ವಿನಂತಿಯ ಮೇರೆಗೆ ಪಾಟೀ ಸವಾಲು ಮುಂದೂಡಲಾಯಿತು.

**(ನನ್ನ ಉಕ್ತಲೇಖನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.
ಪಾವಗಡ.